# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, ಮಾರ್ಚ್–ಏಪ್ರಿಲ್,2017, ಬೆಂಗಳೂರು, ಸಂಪುಟ 2, ಸಂಚಿಕೆ 11–12, ಪುಟಗಳು-4. ಸಂಪಾದಕರು : ಜಿ.ಟಿ.ಗೋವಿಂದಪ್ಪ

Kannada monthly, 10 March - 2017, Bengaluru, Vol. 2, No.11, Pages-4, KARKAN24585/10/12 Editor: G.T. Govindappa.

ಚಂದ: ವಾರ್ಷಿಕ ರೂ. 30, ಆಜೀವ : ರೂ. 500. Subscription : Annual Rs. 30; Life : Rs. 500/-

ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್. Published by: Karnataka Vipassana Prachara Samiti Trust.


## ಧಮ್ಮ ಪದಗಳು

ಸೋ ಕರೋಹಿ ದೀಪಮತ್ತನೋ,
ಖಿಪ್ಪಂ ವಾಯಾಮ ಪಂಡಿತೋ ಭವ;
ನಿದ್ಧಂತಮಲೋ ಅನಂಗಣೋ,
ದಿಬ್ಬಂ ಅರಿಯಭೂಮಿಂ ಉಪೇಹಿಸಿ.

ನಿನ್ನನೇ ದ್ವಿಪವಾಗಿ ಮಾಡಿಕೋ, ಪರಿಶ್ರಮ ಪಡು ಮತ್ತು ಬುದ್ಧಿವಂತನಾಗು. ಮಲಿನತೆಗಳನ್ನು ತೊಡೆದು ಹಾಕು ಮತ್ತು ಕಲೆಗಳನ್ನು ತೊಳೆ. ಆಗ ನೀನು ಶ್ರೇಷ್ಠರು ನೆಲೆಗೊಳ್ಳುವ ದಿವ್ಯ ಸ್ಥಾನವನ್ನು ಪ್ರವೇಶಿಸುವೆ.

**ಧಮ್ಮ ಪದ – 236, ಮಲವಗ್ಗೋ**

## ಧಮ್ಮದ ಜೀವನವನ್ನು ಏಕೆ ಜೀವಿಸಬೇಕು?

### ಆಚಾರ್ಯ ಎಸ್.ಎನ್. ಗೋಯಂಕ (1924–2013)

(1998 ರಲ್ಲಿ ಪ್ರಧಾನ ಆಚಾರ್ಯರಾದ ಶ್ರೀ ಎಸ್.ಎನ್. ಗೋಯಂಕಾಜಿಯವರು ಮಹಾರಾಷ್ಟ್ರದ ನಾಸಿಕ್‌ನ ರಮಾಬಾಯಿ ಅಂಬೇಡ್ಕರ್ ಹೆಣ್ಣು ಮಕ್ಕಳ ಪ್ರೌಢಶಾಲೆಯಲ್ಲಿ ನೀಡಿದ 3 ದಿನಗಳ ಸಾರ್ವಜನಿಕ ಪ್ರವಚನ ಮಾಲಿಕೆಯ ಎರಡನೆಯ ಪ್ರವಚನದ ಭಾಗ ಒಂದು. ಮೊದಲನೆಯ ಪ್ರವಚನದ ಭಾಗ ಒಂದು ಮತ್ತು ಎರಡನ್ನು ಕ್ರಮವಾಗಿ ಡಿಸೆಂಬರ್, 2016 ಮತ್ತು ಜನವರಿ, 2017 ರ 'ವಿಪಶ್ಯನ ವಾರ್ತೆ'ಯಲ್ಲಿ ಪ್ರಕಟಿಸಲಾಗಿತ್ತು. ಮೇ, 2016 ರ ಇಂಗ್ಲೀಷಿನ ವಿಪಶ್ಯನ ವಾರ್ತಾ ಪತ್ರದಿಂದ ಈ ಕೆಳಗಿನದನ್ನು ಅನುವಾದಿಸಲಾಗಿದೆ.)

ಪವಿತ್ರ ಭೂಮಿ ನಾಸಿಕ್‌ನ ಧಮ್ಮ ಪ್ರೇಮಿ ನಾಗರೀಕರಿಗೆ ಶುಭ ಕಾಮನೆಗಳು!

ಧರ್ಮದ ಹೆಸರಿನಲ್ಲಿ ನಾವು ಅಸ್ಪಷ್ಟ ಚಕ್ರವ್ಯೂಹದಲ್ಲಿ ಕಳೆದು ಹೋಗಬಾರದು. ಅದಕ್ಕಾಗಿ ನಾವು ನಿನ್ನೆಯ ಧಮ್ಮ ಸಭೆಯಲ್ಲಿ ನಿಜವಾಗಿ ಧಮ್ಮ ಎಂದರೆ ಏನು ಎಂಬುದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದೆವು. ಶುದ್ಧ ರೂಪದ ಮತ್ತು ಪರಿಶುದ್ಧ ಧಮ್ಮದ ತಿರುಳನ್ನು ಅರ್ಥಮಾಡಿಕೊಳ್ಳೋಣ ಹಾಗೆಯೇ ನಿಜವಾದ ಧಮ್ಮ ಎಂದು ಜನಗಳು ತಪ್ಪಾಗಿ ಗ್ರಹಿಸಿರುವ ಅದರ ಹೊರಪದರುಗಳನ್ನೂ, ಹೊಟ್ಟನ್ನೂ ಸಹ ಅರ್ಥ ಮಾಡಿಕೊಳ್ಳೋಣ. ಇದು ಬಹಳ ಮುಖ್ಯ. ಇದರಿಂದ ಧಮ್ಮದ ತಿರುಳನ್ನು ಗ್ರಹಿಸಲು ಮತ್ತು ಹೊರಗಣ ಸಿಪ್ಪೆಯನ್ನು ಕೈಬಿಡಲು ಸಾಧ್ಯವಾಗುತ್ತದೆ.

ವಾಸ್ತವವಾಗಿ ಧಮ್ಮದ ತಿರುಳು ಬಹಳ ಸರಳ ಮತ್ತು ಸ್ಪಷ್ಟ. ನಾವೇ ನಮ್ಮ ಅಜ್ಞಾನದಿಂದ ಅದನ್ನು ಅಸ್ಪಷ್ಟಗೊಳಿಸಿದ್ದೇವೆ. ಪರಿಶುದ್ಧಗೊಂಡ ಮನಸ್ಸಿನಿಂದ ಹೊರಹೊಮ್ಮುವ ತರಂಗಗಳು ಧರ್ಮ, ಮಲಿನವಾದ ಮನಸ್ಸಿನಿಂದ ಹೊರಹೊಮ್ಮುವ ತರಂಗಗಳು ಧರ್ಮವಲ್ಲ. ಯಾವಾಗ ಮನಸ್ಸು ಪರಿಶುದ್ಧಗೊಳ್ಳುತ್ತದೆಯೋ ಆಗ ವಾಚಿಕ ಮತ್ತು ದೈಹಿಕ ಕ್ರಿಯೆಗಳೆಲ್ಲವೂ ಸಹಜವಾಗಿಯೇ ಶುದ್ಧವಾಗಿರುತ್ತವೆ. ಇದಕ್ಕೆ ಬದಲಾಗಿ ಹೊಟ್ಟೆಕಿಚ್ಚು, ದ್ವೇಷ, ಕಾಮ, ಭಯ, ಅಹಂಕಾರ ಮತ್ತು 'ನಾನು' ಎಂಬ ಬಂಧನದಿಂದ ಮನಸ್ಸು ತುಂಬಿದ್ದರೆ ಆಗ ಅದು ಖಂಡಿತವಾಗಿ ಅಶುದ್ಧ ಮತ್ತು, ವಾಚಿಕ ಮತ್ತು ದೈಹಿಕ ಮಟ್ಟದಲ್ಲಿ ಮಾಡಿದ ಯಾವುದೇ ಕ್ರಿಯೆಯೂ ಸಹ ಅಶುದ್ಧವಾಗಿರುತ್ತದೆ ಮತ್ತು ಹಾನಿಕಾರಕವಾಗಿರುತ್ತದೆ. ಅಂತಹ ವ್ಯಕ್ತಿಯು ತನಗಷ್ಟೇ ಹಾನಿ ಮಾಡಿಕೊಳ್ಳುವುದಿಲ್ಲ, ಇತರರಿಗೂ ಹಾನಿ ಮಾಡುತ್ತಾನೆ.

ತನ್ನ ಮನಸ್ಸನ್ನು ಶುದ್ಧವಾಗಿ ಇಟ್ಟುಕೊಳ್ಳುವ ವ್ಯಕ್ತಿಯು, ಸಹಜವಾಗಿ, ಅನಾಯಾಸವಾಗಿ ಉತ್ತಮ ಜೀವನ ನಡೆಸಲು ಪ್ರಾರಂಭಿಸುತ್ತಾನೆ. ಪರಿಶುದ್ಧವಾದ ಮನಸ್ಸು ತನ್ನದೇ ಆದ ಸ್ವಭಾವವನ್ನು ಹೊಂದಿದೆ. ಅದು ಅನಂತ ಮೈತ್ರಿ, ಅನಂತ ಕರುಣೆ, ಸಹಾನುಭೂತಿಯ ಸಂತೋಷ ಮತ್ತು ಸಮತೆಯಲ್ಲಿ ನೆಲೆಸುತ್ತದೆ. ಅಪರಿಮಿತ ಕರುಣೆಯಿಂದ ತುಂಬಿರುವಂತಹ ವ್ಯಕ್ತಿಯು ಇತರರ ಶಾಂತಿ ಮತ್ತು ಸಂತೋಷವನ್ನು ಕದಡುವ ಮಾತುಗಳನ್ನಾಡಲು ಹೇಗೆ ಸಾಧ್ಯ? ಇತರರಿಗೆ ನೋವು ಮತ್ತು ಹಾನಿ ಮಾಡಲು ಹೇಗೆ ಸಾಧ್ಯ? ಅವನ ಮಾತುಗಳು ಮತ್ತು ಕೃತಿಗಳು ಪ್ರೀತಿಯ ಕರುಣೆ, ಸದ್ಭಾವನೆ ಮತ್ತು ಸ್ನೇಹಪರತೆಯಿಂದ ಮಾತ್ರ ತುಂಬಿರುತ್ತವೆ. ಇತರರಿಗೆ ಹಾನಿ ಮಾಡುವಂತಹ ಮತ್ತು ಅವರ ಶಾಂತಿ ಮತ್ತು ಸಂತೋಷವನ್ನು ಕದಡುವಂತಹ ಮಾತುಗಳನ್ನಾಡುವುದು ಅಥವಾ ದೈಹಿಕ ಕ್ರಿಯೆಗಳನ್ನು ಮಾಡುವುದು ಅವನಿಂದ ಸಾಧ್ಯವಿಲ್ಲ. ಅಂತಹ ವ್ಯಕ್ತಿಗೆ ಯಾರನ್ನೇ ಕೊಲ್ಲಲು, ಯಾವುದನ್ನೇ ಕದಿಯಲು ಅಥವಾ ಇತರ ವ್ಯಕ್ತಿಗೆ ಸೇರಿದ ವಸ್ತುಗಳನ್ನು ಬಲತ್ಕಾರವಾಗಿ ತೆಗೆದುಕೊಳ್ಳುವುದು ಅಥವಾ ಲೈಂಗಿಕ ದುರಾಚಾರದಲ್ಲಿ ತೊಡಗುವುದು ಸಾಧ್ಯವಿಲ್ಲ. ಅವನು ಇತರರಿಗೆ ಹಾನಿ ಮಾಡುವುದಿಲ್ಲ. ತನಗೂ ಹಾನಿಯಾಗಲು ಬಿಡುವುದಿಲ್ಲ. ನಿಶ್ಚಯವಾಗಿ, ತನ್ನ ಜೀವನದಲ್ಲಿ ಧರ್ಮವಿದ್ದು, ಅವನು ಜೀವನ ಕಲೆಯನ್ನು ಕಲಿಯುತ್ತಾನೆ.

ನೀವೂ ಸಹ ನಿಮ್ಮನ್ನು ನೀವೇ ಗಮನಿಸುವ ಮತ್ತು ಸತ್ಯವನ್ನು ನೋಡುವ ಕಲೆಯನ್ನು ಯಾವಾಗ ಕಲಿಯುತ್ತೀರೋ ಆಗ ಬೇರೆಯವರಿಗೆ ಹಾನಿ ಮಾಡುವ ಮೊದಲು ನಿಮಗೇ ನೀವು ಹಾನಿ ಮಾಡಿಕೊಳ್ಳುತ್ತೀರಿ ಎಂಬುದು ಬಹಳ ಸ್ಪಷ್ಟವಾಗುತ್ತದೆ. ವ್ಯಕ್ತಿಯು ಮೊದಲು ತನ್ನಲ್ಲಿಯೇ ಮಲಿನತೆಗಳ ಉರಿ ಹೊತ್ತಿಸಿಕೊಳ್ಳದೆ ಕಠಿಣ, ಕೋಪದ ಮಾತುಗಳಿಂದ ಅಥವಾ ಸುಳ್ಳುಗಳಿಂದ ಅಥವಾ ಹಾನಿಕಾರಕ ಕ್ರಿಯೆಗಳಿಂದ ಬೇರೊಬ್ಬ ವ್ಯಕ್ತಿಗೆ ಕೇಡು ಮಾಡಲು ಹೇಗೆ ಸಾಧ್ಯ? ಮಲಿನತೆಗಳು ಬಂದರೆ ಆಗ ತಳಮಳವೂ ಸಹ ಬರುತ್ತದೆ. ಅದು ಅನಿವಾರ್ಯ. ಅದು ಪ್ರಕೃತಿಯ ನಿಯಮ.

ಭಾರತದ ಪುರಾತನ ಭಾಷೆಯಲ್ಲಿ ಇದನ್ನು ಧಮ್ಮ (ಧರ್ಮ) ಎಂದು ಕರೆಯುತ್ತಿದ್ದರು. ವ್ಯಕ್ತಿಯು ತನ್ನಲ್ಲಿಯೇ ಗಮನಿಸಲು ಪ್ರಾರಂಭ ಮಾಡಿದಾಗ, ಈ ಪ್ರಕೃತಿಯ ನಿಯಮವು, ಅಥವಾ ಅದನ್ನು ಧಮ್ಮ ಎಂದು ಕರೆಯಿರಿ, ಅನುಭವದ ಮಟ್ಟದಲ್ಲಿ ಪ್ರಕಟಗೊಳ್ಳಲು ಪ್ರಾರಂಭಿಸುತ್ತದೆ. ಇದು ಯಾರಿಗೂ ಭಿನ್ನ ಭೇದ ಅಥವಾ ಪಕ್ಷಪಾತ ಮಾಡುವುದಿಲ್ಲ. ಏಕೆಂದರೆ, ಅದು ಎಲ್ಲರಿಗೂ ಅನ್ವಯಿಸುತ್ತದೆ, ಎಲ್ಲಾ ಕಾಲಕ್ಕೂ ಮತ್ತು ಎಲ್ಲಾ ಸಮಯಕ್ಕೂ ವ್ಯಾಪಿಸುತ್ತದೆ. ಅದನ್ನು ಮುರಿದರೆ ತಕ್ಷಣವೇ ಶಿಕ್ಷೆ ಹಿಂಬಾಲಿಸುತ್ತದೆ. ವ್ಯಕ್ತಿಯು ಸಾರ್ವತ್ರಿಕ ನಿಯಮಕ್ಕನುಸಾರವಾಗಿ ಬದುಕಿದರೆ, ಆಗ ಶಾಂತಿ ಮತ್ತು ಸಂತೋಷವೂ ಸಹ ಅನಿವಾರ್ಯವಾಗಿ ಹಿಂಬಾಲಿಸುತ್ತದೆ. ಸಂತೋಷವಾಗಿರಲು ವ್ಯಕ್ತಿಯು ಈಗ ಮತ್ತು ಇಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಗಮನಹರಿಸಿ ಕೆಲಸ ಮಾಡಬೇಕು; ಸತ್ತ ಮೇಲೆ ಸಂತೋಷಕರವಾದ ಪುನರ್ಜನ್ಮ ಪಡೆಯುವ ಬಗ್ಗೆ ಗಮನವಿಡುವ ಅವಶ್ಯಕತೆಯಿಲ್ಲ. ಏಕೆಂದರೆ, ತನ್ನನ್ನು ತಾನು ಶುದ್ಧಿ ಮಾಡಿಕೊಳ್ಳುವುದರ ಮೇಲೆ ಕೆಲಸ ಮಾಡುತ್ತಿದ್ದರೆ ಸತ್ತ ಮೇಲೆ ಏನು ಆಗುತ್ತದೆಯೋ ಅದೂ ಒಳ್ಳೆಯದೇ ಆಗುತ್ತದೆ.

ಶುದ್ಧ ಧರ್ಮದ ಮಾರ್ಗದಲ್ಲಿ ಇಡುವ ಪ್ರತಿಯೊಂದು ಹೆಜ್ಜೆಯೂ

ನಮಗೆ ಶಾಂತಿ ಮತ್ತು ಸಂತೋಷವನ್ನು ಕೊಡುತ್ತದೆ. ನಮ್ಮಲ್ಲಿ ಶಾಂತಿ ಮತ್ತು ಸಂತೋಷ ಇಲ್ಲದಿದ್ದರೆ ಮತ್ತು ನಾವು ಧಾರ್ಮಿಕರಾಗಿದ್ದೇವೆ ಎಂದು ಯೋಚಿಸುತ್ತಿದ್ದರೆ ನಮ್ಮನ್ನು ನಾವೇ ಮೂರ್ಖರಾಗಿಸಿಕೊಳ್ಳುತ್ತೇವೆ. ಕೆಲವು ಧಾರ್ಮಿಕ ವಿಧಿ ಮತ್ತು ನಿತ್ಯಾಚರಣೆಗಳನ್ನು ಮಾಡುತ್ತಾ, ಕೆಲವು ಹಬ್ಬಗಳನ್ನು ಆಚರಿಸುತ್ತಾ ಅಥವಾ ಕೆಲವು ಧಾರ್ಮಿಕ ಸಿದ್ಧಾಂತಗಳನ್ನು ನಂಬುತ್ತಾ ನಾವು ಧಾರ್ಮಿಕರೆಂದು ಆಳವಾಗಿ ಯೋಚಿಸಿದರೆ ನಮ್ಮನ್ನು ನಾವೇ ಮೂರ್ಖರಾಗಿಸಿಕೊಳ್ಳುತ್ತೇವೆ. ನಾವು ಧರ್ಮವಿಲ್ಲದೇ ಇರಬಹುದು ಮತ್ತು ನಮ್ಮ ಮನಸ್ಸುಗಳನ್ನು ಶುದ್ಧಿ ಮಾಡಲು ಯಾವುದೇ ಪ್ರಯತ್ನ ಮಾಡದೇ ಇರಬಹುದು. ಆದರೂ ನಾವು ಬಹಳ ಧಾರ್ಮಿಕ ವ್ಯಕ್ತಿಗಳೆಂದು ಭಾವಿಸಬಹುದು.

ನಕಾರಾತ್ಮಕತೆಗಳ ಮೇಲು ಮೇಲಿನ ಪದರಗಳನ್ನು ತೆಗೆಯುವುದು ಸುಲಭ. ಆದರೆ ಮಲಿನತೆಗಳು ಆಳದಿಂದ ಹುಟ್ಟಿ ಬರುತ್ತವೆ ಮತ್ತು ನಕಾರಾತ್ಮಕತೆಗಳು ಬೆಳೆಯುವುದು ಮುಂದುವರಿದು ವ್ಯಕ್ತಿಯನ್ನು ರೂಢಿಗಳ ಬಲವಾದ ಬಲೆಯಲ್ಲಿ ಬಂಧಿಸುತ್ತವೆ. ಆನಂದದ ಸಣ್ಣ ಭಾವನೆಯೂ ಕಟ್ಟಾಸೆಗೆ ಎಡೆ ಮಾಡಿಕೊಡುತ್ತದೆ. ಹಾಗೆಯೇ ಯಾವುದೇ ಅಹಿತಕರ ಭಾವನೆ ದ್ವೇಷಕ್ಕೆ ಎಡೆಮಾಡಿಕೊಡುತ್ತದೆ.

ಈ ರೀತಿಯ ಅಭ್ಯಾಸಗಳಿಂದ ಹೊರಬರುವುದು ಹೇಗೆ? ಮೇಲ್ಮಟ್ಟದಲ್ಲಿ ಬದಲಾಯಿಸುವುದು ಸುಲಭ. ಇದನ್ನು ಮಾಡಲು ಬಹಳಷ್ಟು ದಾರಿಗಳಿವೆ. ಕನಿಷ್ಠ ಪಕ್ಷ ಮನಸ್ಸಿನ ಮೇಲ್ಮಟ್ಟವಾದರೂ ಸುಧಾರಿಸುತ್ತದೆ. ಇದು ಒಳ್ಳೆಯದೇ. ಆದರೆ ಅದರ ಬೇರುಗಳ ಬಗ್ಗೆ ಏನು? ವ್ಯಕ್ತಿಯ ನಿಜವಾದ ಕಲ್ಯಾಣಕ್ಕಾಗಿ ಮತ್ತು ಅವನು ಧಮ್ಮದ ಜೀವನ ನಡೆಸಬೇಕಾದರೆ, ಇಲ್ಲಿಯೇ ಮನಸ್ಸು ಬದಲಾಗಬೇಕಿರುವುದು. ಭಾರತದ ಈ ಪುರಾತನ ಸಂಪತ್ತು, ವಿಪಶ್ಯನ, ಇದನ್ನು ಮಾಡುವುದು ಹೇಗೆ ಎಂಬುದನ್ನು ಬೋಧಿಸುತ್ತದೆ. ನಮ್ಮೊಳಗೆ ಆಳಕ್ಕೆ ಹೋಗಿ ಬೇರು ಮಟ್ಟದಲ್ಲಿ ಮನಸ್ಸನ್ನು ಶುದ್ಧಿ ಮಾಡುವ ಮಾರ್ಗವನ್ನು ಅದು ಕೊಡುತ್ತದೆ.

**ಸತ್ಯವನ್ನು ಅದು ಹೇಗಿದೆಯೋ ಹಾಗೆಯೇ ನೋಡುವುದು**

ತನ್ನೊಳಗಿನ ಸತ್ಯವನ್ನು ಅದು ಹೇಗಿದೆಯೋ ಹಾಗೆಯೇ ಗಮನಿಸುವುದು ನಿಜವಾಗಿಯೂ ಭಾರತದ ಪುರಾತನ ಸಾಧನವಾಗಿದೆ. ವ್ಯಕ್ತಿಯು ಹೆಚ್ಚು ಆಳಕ್ಕೆ ಪ್ರವೇಶಿಸುತ್ತಿದ್ದಂತೆ ಸಾರ್ವತ್ರಿಕ ನಿಯಮವು ಬಹಳ ಸ್ಪಷ್ಟವಾಗಲು ಪ್ರಾರಂಭಿಸುತ್ತದೆ. ಸತ್ಯವನ್ನು ಹುಡುಕುವ ವಿಜ್ಞಾನಿಗಳ ತರಹ ಭಾರತದ ಮಹಾನ್ ಋಷಿಮುನಿಗಳೂ ಸಹ ತಮ್ಮೊಳಗೆ ಆಳದಲ್ಲಿ ಪರಿಶೋಧಿಸಿ ಸಾರ್ವತ್ರಿಕ ನಿಯಮದ ರಹಸ್ಯವನ್ನು ಬಯಲು ಮಾಡಿದರು. ಈ ಸಾರ್ವತ್ರಿಕ ನಿಯಮವನ್ನು '***ರಿತ್***' ಎಂದು ಕರೆಯಲಾಗುತ್ತಿತ್ತು. ಆದ್ದರಿಂದ ಅವರನ್ನು ಋಷಿಗಳು ಎಂದು ಕರೆದರು. ಅವರು ಮೌನವಾಗಿದ್ದುದರಿಂದ ಅವರನ್ನು ಮುನಿಗಳು ಎಂದೂ ಕರೆಯಲಾಗುತ್ತಿತ್ತು. ಸಾರ್ವತ್ರಿಕ ನಿಯಮ, '***ರಿತ್***', ಧಮ್ಮ ಏನು ಎಂಬುದನ್ನು ಕಾಣಲು ಅವರು ಸಂಶೋಧಿಸಿದರು.

ಈ ಮಹತ್ತರವಾದ ಸತ್ಯವನ್ನು ನಾವು ಮರೆತ್ತಿದ್ದೇವೆ ಮತ್ತು ಧರ್ಮದ ಹೊರಗಣ ಪದರಗಳನ್ನೇ ಅದರ ತಿರುಳೆಂದು ಪರಿಗಣಿಸಿದ್ದೇವೆ. ಬೇರು ಮಟ್ಟಕ್ಕೆ ಹೋಗಿ ಮನಸ್ಸನ್ನು ಶುದ್ಧಿ ಮಾಡುವುದನ್ನು ನಾವು ಮರೆತಿದ್ದೇವೆ. ಆದರೆ ನಿಜವಾದ ಸಂತರಾದವರು ಮರೆಯಲಿಲ್ಲ. ಇರುವಿಕೆಯ ಸತ್ಯವನ್ನು ಅವರು ಅರಿತರು. ಭಾರತದ ಮಹಾನ್ ಸಂತರಾದ ನಾನಕರು "ಅವನ ಅಪ್ಪಣೆಗಳ ಪ್ರಕಾರ ನಡೆಯಿರಿ" ಎಂದು ಹೇಳಿದರು.

'ಅವನ' ಅಪ್ಪಣೆಗಳ ಪ್ರಕಾರ ನಡೆಯುವುದು? ಹೇಗೆ? 'ಅವನು' ಅಂದರೆ ದೇವರು, ಅಲ್ಲಾಹ್ ಅಥವಾ ನಾವು ಪ್ರಕೃತಿ ಎಂದು ಹೇಳಬಹುದು, ಬಯಸಿದ ಹಾಗೆಯೇ ಮಾರ್ಗದಲ್ಲಿ ನಡೆಯುವುದು. ವ್ಯಕ್ತಿಯು ತನ್ನೊಳಗೆ ಗಮನಿಸಿದಾಗ, ನಿಜವಾಗಿ 'ಅವನು' ಏನನ್ನು ಬಯಸುತ್ತಾನೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಪ್ರಾರಂಭಿಸುತ್ತಾನೆ.

ಒಂದು ಆದೇಶವೆಂದರೆ, ನಿಮ್ಮ ಮನಸ್ಸನ್ನು ಮಲಿನಗೊಳಿಸಿಕೊಳ್ಳಬೇಡಿ. ಯಾರು ಅದನ್ನು ಮಲಿನಗೊಳಿಸುತ್ತಾರೋ, ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ನೀವು ಕೋಪಗೊಂಡಾಗ, ದ್ವೇಷ, ಭಯ, ಅಹಂಕಾರಪಟ್ಟಾಗ, ಅಥವಾ ರಾಗವನ್ನುಂಟು ಮಾಡಿಕೊಂಡಾಗ ಎಷ್ಟು ತಳಮಳಗೊಳ್ಳುತ್ತೀರಿ ಎಂಬುದನ್ನು ಗಮನಿಸಿ.

ನಾನಕರು ಹೇಳಿದ ಈ ಪ್ರಕೃತಿಯ ನಿಯಮ ಎಲ್ಲಿದೆ? ಯಾವುದೇ ಪುಸ್ತಕದಲ್ಲಿಲ್ಲ ಮತ್ತು ಅಂತಹ ಪ್ರವಚನಗಳನ್ನು ಕೇಳಿ ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಆ ಸಂತ ಮಾಡಿದಂತೆ ತನ್ನೊಳಗೇ ಆಳದಲ್ಲಿ ಅನ್ವೇಷಿಸುವುದರಿಂದ ಮಾತ್ರ ತಿಳುವಳಿಕೆ ಬರುತ್ತದೆ. ಈ ಪದಗಳಿಗೆ ಅರ್ಥವನ್ನು ಹೊರಗಡೆ ಹುಡುಕುವುದರಿಂದ ಸಹಾಯವಾಗುವುದಿಲ್ಲ. ಏಕೆಂದರೆ, ಅವುಗಳ ಅರ್ಥವು ಒಳಗಡೆ ಕೆತ್ತಲ್ಪಟ್ಟಿದೆ.

ಅನುಭವದ ಮಟ್ಟದಲ್ಲಿ ಜಗತ್ತಿನ ನಿಯಮವನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಈ ನಿಯಮದ ಪ್ರಕಾರ ಬದುಕುವುದೇ ಧಾರ್ಮಿಕನಾಗುವುದು. ತನ್ನನ್ನು ತಾನು ಯಾವುದೇ ಹೆಸರಿನಿಂದ ಕರೆದುಕೊಂಡರೂ, ಯಾವುದೇ ನಂಬಿಕೆಯನ್ನು ಹೊಂದಿದ್ದರೂ, ಯಾವುದೇ ಉಡುಪನ್ನು ಧರಿಸಿದರೂ ಚಿಂತೆಯಿಲ್ಲ. ನಿಜವಾದ ಧರ್ಮವು ಯಾವುದೇ ಪಂಥೀಯ ನಂಬಿಕೆಯಿಂದ ಬಂಧಿಸಲ್ಪಡಲು ಎಂದಿಗೂ ಸಾಧ್ಯವಿಲ್ಲ. ಅದು ಯಾವಾಗಲೂ ಸಾರ್ವತ್ರಿಕವಾಗಿರುತ್ತದೆ. ಎಲ್ಲರಿಗೂ, ಎಲ್ಲಾ ಸ್ಥಳದಲ್ಲೂ, ಎಲ್ಲಾ ಸಮಯದಲ್ಲೂ ಅನ್ವಯವಾಗುತ್ತದೆ. ಯಾವುದು ಮುಖ್ಯ ಎಂದರೆ, ತನ್ನ ಮನಸ್ಸನ್ನು ಶುದ್ಧಿ ಮಾಡಿಕೊಳ್ಳಲು ವ್ಯಕ್ತಿಯು ಕೆಲಸ ಮಾಡಲು ಪ್ರಾರಂಭಿಸುವುದು.

ಒಬ್ಬ ವ್ಯಕ್ತಿಯು ಧರ್ಮದ ಜೀವನ ನಡೆಸಲು ಪ್ರಾರಂಭಿಸಿದಾಗ ಅದರ ಪ್ರಯೋಜನಗಳನ್ನು ಕೂಡಲೇ ಕಾಣುತ್ತಾನೆ. ಸಾಮಾನ್ಯವಾಗಿ ನಂಬುವಂತೆ ಸತ್ತ ಮೇಲೆ ಮಾತ್ರ ಅಲ್ಲ. ಇದು ಈ ರೀತಿ ಎಂದು ಹೇಳಲು ಸತ್ತ ಮೇಲೆ ಯಾರು ವಾಪಸು ಬಂದಿದ್ದಾರೆ? ಸತ್ತ ಮೇಲೂ ಸಹ ಪ್ರಯೋಜನಗಳನ್ನು ಕೊಡುವುದನ್ನು ಧರ್ಮ ಮುಂದುವರಿಸುತ್ತದೆ. ಆದರೆ ಪ್ರಯೋಜನಗಳು ಈಗಲೇ ಮತ್ತು ಇಲ್ಲಿಯೇ ಬರಬೇಕು. ಭವಿಷ್ಯತ್ತು ಉತ್ತಮವಾಗುವ ಮೊದಲು ಪ್ರಸ್ತುತ ಉತ್ತಮವಾಗಬೇಕು.

**ಬೋಧನೆಗಳು**

ಪುರಾತನ ಭಾರತದ ಈ ಬೋಧನೆಯನ್ನು ವಿಪಶ್ಯನ ಅಥವಾ ವಿದರ್ಶನ – ಅಂದರೆ ಸತ್ಯವನ್ನು ನೋಡುವುದು ಅಥವಾ ***ರಿತ್ ದರ್ಶನ*** ಎಂದು ಕರೆಯಲಾಗುತ್ತಿತ್ತು. ಸಾವಿರಾರು ವರ್ಷಗಳ ಹಳೆಯದಾದರೂ, ಅದು ಕಳೆದುಹೋಗಿತ್ತು. 2600 ವರ್ಷಗಳ ಹಿಂದೆ, ಪುರುಷರಲ್ಲಿಯೇ ಅಸಮಾನ್ಯನಾದ ಭಗವಾನ್ ಬುದ್ಧನಿಂದ ಮತ್ತೊಮ್ಮೆ ಕಂಡುಹಿಡಿಯಲ್ಪಟ್ಟಿತು. ಅದರಿಂದ ಪ್ರಯೋಜನ ಪಡೆದಿದ್ದರಿಂದ, ಅದನ್ನು ಬಹಳ ಕರುಣೆಯಿಂದ ಜನಗಳಿಗೆ ಹಂಚಲು ಪ್ರಾರಂಭಿಸಿದ. ಬುದ್ಧರು ಎಲ್ಲಿ ನೋಡಿದರೂ ಅಲ್ಲಿ ದುಃಖವಿತ್ತು. ಜನಗಳು ಈ ಪ್ರಯೋಜನಕಾರಿ ಜ್ಞಾನವನ್ನು ಪಡೆದರೆ, ಅವರು ಅವರ ಮನಸ್ಸನ್ನು ಶುದ್ಧಿ ಮಾಡಿಕೊಳ್ಳಲು ಶಕ್ತರಾಗುತ್ತಾರೆ ಮತ್ತು ನೋವು ಮತ್ತು ದುಃಖದಿಂದ ಹೊರ ಬರುತ್ತಾರೆ ಎಂಬುದನ್ನು ಮನಗಂಡಿದ್ದರು.

ಈ ದೇಶವು ವಿಪಶ್ಯನವನ್ನು ತೆರೆದ ಕೈಗಳಿಂದ ಸ್ವೀಕರಿಸಿತು. ಚರಿತ್ರೆ ಪುನರಾವರ್ತನೆಯಾಗುತ್ತಿದೆ ಮತ್ತು ಮತ್ತೊಮ್ಮೆ ಈ ದೇಶ ಅದನ್ನು ಒಪ್ಪಿಕೊಳ್ಳುತ್ತಿದೆ. ಈ ಮಧ್ಯಭಾರತದ ಈ ಭಾಗದಲ್ಲಿ ಪ್ರಥಮ ಬಾರಿಗೆ ವಿಪಶ್ಯನವು ಹೇಗೆ ಬಂತು ಎಂಬುದರ ಬಗ್ಗೆ ಒಂದು ಸ್ವಾರಸ್ಯಕರ ಕಥೆಯಿದೆ. ಬುದ್ಧನ ಕಾಲದಲ್ಲಿ, ಸಾಮಾನುಗಳನ್ನು ಕೊಂಡು ಮಾರುವ ವ್ಯಾಪಾರ ಮಾಡುತ್ತಿದ್ದ ಪುಣ್ಣ (ಪೂರ್ಣ) ಎಂಬ ಹೆಸರಿನ ಯಶಸ್ವಿ ವ್ಯಾಪಾರಸ್ಥ ವ್ಯಾಪಾರದ ಸಲುವಾಗಿ ಕೋಸಲ ರಾಜ್ಯಕ್ಕೆ ಬಂದಿದ್ದ. ಆಗಿನ ಕಾಲದಲ್ಲಿ, ಕೋಸಲ ರಾಜ್ಯದ ರಾಜಧಾನಿಯಾದ ಶಾವಸ್ತಿ ನಗರವು ಬಹಳ ಜನಸಂಖ್ಯೆ ಮತ್ತು ಪ್ರಗತಿ ಹೊಂದಿದ ನಗರಗಳಲ್ಲಿ ಒಂದಾಗಿತ್ತು. ಪುಣ್ಣನ ***ಪಾರಮಿಗಳು*** (ಮುಕ್ತಿಗೆ ಮುನ್ನಡೆಸುವ ಒಳ್ಳೆಯ ಗುಣಗಳು) ಫಲ ಕೊಡುವ ಸಮಯ ಅದಾಗಿತ್ತು. ಬುದ್ಧನ ಬೋಧನೆಗಳನ್ನು ಕೇಳಿ ರೋಮಾಂಚನಗೊಂಡು "ಓ, ಮನಸ್ಸನ್ನು ಬೇರು ಮಟ್ಟದಲ್ಲಿ ಪರಿಶುದ್ಧಗೊಳಿಸುವ ಮಾರ್ಗವೊಂದಿದೆಯೇ? ಅದಕ್ಕಿಂತ ಹೆಚ್ಚಿನದು ಏನು ಬೇಕು!" ಅವನು ಬುದ್ಧನ ಬಳಿಗೆ ಹೋಗಿ ವಿಪಶ್ಯನವನ್ನು ಕಲಿತು ಶ್ರದ್ಧೆಯಿಂದ ಅಭ್ಯಾಸ ಮಾಡಿದ ಮತ್ತು ಧರ್ಮದಲ್ಲಿ ಪ್ರಗತಿ ಹೊಂದಿದ.

ಯಾವಾಗ ವ್ಯಕ್ತಿಯು ಧರ್ಮಾಮೃತದ ರುಚಿ ನೋಡುತ್ತಾನೋ ಮತ್ತು ಪರಮಾನಂದವನ್ನು ಅನುಭವಿಸುತ್ತಾನೋ ಆಗ ಅದನ್ನು ತನ್ನಲ್ಲಿಯೇ ಇಟ್ಟುಕೊಳ್ಳಲು ಸಾಧ್ಯವಿಲ್ಲ. "ಎಲ್ಲರೂ ಇಂತಹ ಶಾಂತಿ ಮತ್ತು ಪರಮಾನಂದವನ್ನು ಅನುಭವಿಸಲಿ" ಎಂದು ಅದನ್ನು ಎಲ್ಲರೊಡನೆ ಹಂಚಿಕೊಳ್ಳುವ ಉತ್ಕಟೇಚ್ಛೆ ಬರುತ್ತದೆ. ಇಂತಹ ಪ್ರಯೋಜನಕಾರಿ ಜ್ಞಾನವನ್ನು ನನ್ನ ದೇಶದ ಜನಗಳಿಗೆ ಹೇಳಿಕೊಡಲು ನನಗೆ ಅನುಮತಿ ಕೊಡಿ ಎಂದು ಕೈಮುಗಿದು ಬುದ್ಧನನ್ನು ಬೇಡಿದ. ಬುದ್ಧ ನಸುನಕ್ಕ. ಅವನನ್ನು ಪರೀಕ್ಷಿಸುವ ಸಲುವಾಗಿ ಬುದ್ಧ ಹೇಳಿದ, "ಓ ನೀನು ನಿನ್ನ ದೇಶದ ಜನಗಳನ್ನು ಬಲ್ಲೆ, ಅಲ್ಲವೇ?" "ಹೌದು ದೇವ, ನಾನು ಅಲ್ಲಿ ಹುಟ್ಟಿರುವುದರಿಂದ ಅವರನ್ನು ಚೆನ್ನಾಗಿ ಬಲ್ಲೆ" ಎಂದು ಪುಣ್ಣ ಉತ್ತರಿಸಿದ.

"ನಿನ್ನ ದೇಶದ ಜನರು ಸ್ವಭಾವತಃ ಬಹಳ ಆಕ್ರಮಣಕಾರಿಗಳು. ನೀನು ಒಂದು ಹೊಸ ವಿದ್ಯೆಯನ್ನು ಪರಿಚಯಿಸಿದರೆ ಮತ್ತು ಅದನ್ನು ಅವರು ಇಷ್ಟಪಡದಿದ್ದರೆ ಅವರು ನಿನ್ನನ್ನು ಹೊಡೆದು ದುಃಖಕ್ಕೀಡು ಮಾಡಬಹುದು." "ಹೌದು ದೇವ, ಇದು ನನಗೆ ಚೆನ್ನಾಗಿ ತಿಳಿದಿದೆ. ಆದರೂ, ಅವರು ಆಕ್ರಮಣಕಾರಿಗಳಾಗಿದ್ದರೂ ಅವರು ಬಹಳ ಸೂಕ್ಷ್ಮಮತಿಗಳು, ಅವರು ಸತ್ಯವನ್ನು ತಿಳಿದರೆ ತಕ್ಷಣವೇ ಒಪ್ಪಿಕೊಳ್ಳುತ್ತಾರೆ. ಆದ್ದರಿಂದ, ಅವರಿಗೆ ಕಲಿಸಲು ನನಗೆ ಅನುಮತಿ ಕೊಡಿ."

ಆದರೆ ಭಗವಾನರು ಅವನನ್ನು ಹೆಚ್ಚು ಪರೀಕ್ಷಿಸಲು ಈ ರೀತಿ ಕೇಳಿದರು: "ನೀವು ನಿಮ್ಮ ಧಾರ್ಮಿಕ ವಿಧಿಗಳನ್ನು ಮತ್ತು ನಿತ್ಯಾಚರಣೆಗಳನ್ನು ಪಕ್ಕಕ್ಕಿಟ್ಟು ನಿಮ್ಮಲ್ಲಿಯೇ ಆಳವಾಗಿ ಹೋಗಿ ಸತ್ಯವನ್ನು ನೋಡಿ, ಮನಸ್ಸನ್ನು ಶುದ್ಧಿ ಮಾಡುವುದನ್ನು ಕಲಿಯಿರಿ ಮತ್ತು ಮಲಿನತೆಗಳನ್ನು ತೆಗೆದುಹಾಕಿ, ಎಂದು ನೀನು ಹೇಳಿದರೆ, ಆಗ ಈ ಬೋಧನೆಗಳನ್ನು ಒಂದು ರೀತಿ ಹೊಸದಾಗಿವೆ ಮತ್ತು ಆಶ್ಚರ್ಯಕರವಾಗಿವೆ ಎಂದು ನೋಡುವವರು ನಿನ್ನನ್ನು ಕೋಪದಿಂದ ನಿಂದಿಸಬಹುದು. ಆಗ ನೀನು ಏನು ಮಾಡುವೆ?" "ದೇವ, ಆಗ ನಾನು, ನೀವು ಎಂತಹ ಒಳ್ಳೆಯ ಜನಗಳು. ನೀವು ನನ್ನನ್ನು ಬರೀ ಬಾಯಿ ಮಾತಿನಲ್ಲಿ ನಿಂದಿಸುತ್ತಿದ್ದೀರಿ. ನಿಮ್ಮ ಜಾಗದಲ್ಲಿ ಬೇರೆ ಯಾರಾದರೂ ಇದ್ದಿದ್ದರೆ ನನ್ನನ್ನು ಕಲ್ಲಿನಿಂದ ಹೊಡೆಯುತ್ತಿದ್ದರು ಎಂದು ಹೇಳುತ್ತೇನೆ." "ಅವರು ನಿನ್ನನ್ನು ಕಲ್ಲಿನಿಂದ ಹೊಡೆದರೆ?" "ಆಗ ನಾನು ಕೈ ಮುಗಿದು ಅವರಿಗೆ ಹೇಳುತ್ತೇನೆ. ನೀವು ಎಷ್ಟೊಂದು ಒಳ್ಳೆಯವರು. ನೀವು ನನ್ನನ್ನು ಕಲ್ಲಿನಿಂದ ಮಾತ್ರ ಹೊಡೆಯುತ್ತಿದ್ದೀರಿ. ನಿಮ್ಮ ಜಾಗದಲ್ಲಿ ಬೇರೆ ಯಾರಾದರೂ ಇದ್ದಿದ್ದರೆ ನನ್ನನ್ನು ದೊಣ್ಣೆಗಳಿಂದ ಹೊಡೆಯುತ್ತಿದ್ದರು". "ಅವರು ನಿನ್ನನ್ನು ದೊಣ್ಣೆಗಳಿಂದ ಹೊಡೆದರೆ?" "ಆಗ ದೇವ ನಾನು ಅವರಿಗೆ ಹೇಳುತ್ತೇನೆ: ನೀವು ಎಷ್ಟೊಂದು ಒಳ್ಳೆಯವರು. ನಿಮ್ಮ ಜಾಗದಲ್ಲಿ ಯಾರೇ ಇದ್ದರೂ ಖಡ್ಗಗಳಿಂದ ನನ್ನ ಕೈಕಾಲುಗಳನ್ನು ತುಂಡರಿಸುತ್ತಿದ್ದರು". "ನಿಜವಾಗಿಯೂ ಅವರು ನಿನ್ನನ್ನು ಖಡ್ಗಗಳಿಂದ ತುಂಡರಿಸಲು ಪ್ರಯತ್ನಿಸಿದರೆ?" "ಆಗ ದೇವ, ನಾನು ಅವರಿಗೆ ಹೇಳುತ್ತೇನೆ: ನಿಜವಾಗಿ ನೀವು ಬಹಳ ದಯಾಳುಗಳು, ನೀವು ನನ್ನ ಕೈಕಾಲುಗಳನ್ನು ಮಾತ್ರ ಕತ್ತರಿಸುತ್ತಿದ್ದೀರಿ. ನಿಮ್ಮ ಜಾಗದಲ್ಲಿ ಬೇರೆ ಯಾರಾದರೂ ಇದ್ದಿದ್ದರೆ ನನ್ನನ್ನು ಕೊಲ್ಲುತ್ತಿದ್ದರು. ನೀವು ನನ್ನನ್ನು ಕೊಲ್ಲುತ್ತಿಲ್ಲ. ನೀವು ಬಹಳ ದಯಾಳುಗಳು." "ಆಗ ನಿಜವಾಗಿ ಅವರು ನಿನ್ನನ್ನು ಕೊಲ್ಲಲು ಸಿದ್ಧವಾದರೆ?" ಎಂದು ಕೊನೆಗೆ ಬುದ್ಧ ಕೇಳಿದ. "ಆಗ ದೇವ, ನಾನು ಅವರಿಗೆ ಹೇಳುತ್ತೇನೆ: ಈ ಜಗತ್ತಿನಲ್ಲಿ ಎಷ್ಟೊಂದು ದುಃಖ ಇದೆ. ಅದರ ಕಾರಣದಿಂದ ಜನಗಳು ಆತ್ಮಹತ್ಯೆ ಮಾಡಿಕೊಂಡು ಪಾಪ ಕರ್ಮಗಳನ್ನು ಉತ್ಪತ್ತಿ ಮಾಡಿಕೊಳ್ಳುತ್ತಾರೆ. ಈಗ ನೀವು ನನ್ನನ್ನು ಕೊಂದು ಭಯಾನಕ ಆತ್ಮಹತ್ಯೆಯ ಕರ್ಮದಿಂದ ನನ್ನನ್ನು ರಕ್ಷಿಸುತ್ತಿದ್ದೀರಿ. ನೀವು ಎಷ್ಟೊಂದು ದಯಾಳುಗಳು."

ಪುಣ್ಣ, ಧರ್ಮದಲ್ಲಿ ಸಾಕಷ್ಟು ಪ್ರಗತಿ ಹೊಂದಿದ್ದಾನೆ ಎಂಬುದನ್ನು ಬುದ್ಧನು ಮನಗಂಡು "ಹೋಗು, ಧಮ್ಮವನ್ನು ಹರಡು" ಎಂದು ಹೇಳುತ್ತಾನೆ.

ಈ ಘಟನೆಯು ಸರಿಯಾಗಿ ದಾಖಲಾದ ಒಂದು ಸತ್ಯ. ಆದರೆ ಪುಣ್ಣ ಯಾವ ಕಷ್ಟಗಳನ್ನು ಎದುರಿಸಬೇಕಾಯಿತು ಎಂಬುದು ನಮಗೆ ಗೊತ್ತಿಲ್ಲ. ಆದರೂ, ಜನಗಳು ಅವನನ್ನು ಅನುಸರಿಸಲು ಪ್ರಾರಂಭಿಸಿದರು. ಆಧ್ಯಾತ್ಮ ಶಿಸ್ತಿನ (ತಪಸ್ಸಿನ) ಪವಿತ್ರ ತಪೋವನಗಳು ಮತ್ತು ವಿಪಶ್ಯನ ಧ್ಯಾನ ಈ ಇಡೀ ಪ್ರದೇಶದಲ್ಲಿ ಹುಟ್ಟಿ ಬೆಳೆದವು. ವಜ್ರಗಳನ್ನು ಕೊರೆಯುವಂತೆ ಈ ಹೆಬ್ಬಂಡೆಗಳನ್ನು ಕೊರೆದು ಧ್ಯಾನ ಮಾಡುವುದಕ್ಕಾಗಿ ಜನರು ಗುಹೆಗಳನ್ನು ನಿರ್ಮಿಸಿದ್ದಾರೆ. ಇದೂ ಸಹ ಚೆನ್ನಾಗಿ ದಾಖಲಾಗಿದೆ. ವಿಪಶ್ಯನ ಅತಿವೇಗವಾಗಿ ಬೆಳೆಯಿತು. ಜನಗಳು ತಿಳುವಳಿಕೆಯುಳ್ಳವರಾಗಿದ್ದಾರೆ ಮತ್ತು ವಾಸ್ತವಿಕ ವಿಷಯವನ್ನು ಸರಿಯಾಗಿ ತಿಳಿಸಿ ಹೇಳಿದರೆ ನಿಜವಾಗಿಯೂ ಒಪ್ಪಿಕೊಳ್ಳುತ್ತಾರೆ.

ಅಲ್ಲಿಂದ ಸುಮಾರು 1000 ವರ್ಷಗಳ ನಂತರ ಈ ಪ್ರದೇಶವನ್ನು ಹಾಯ್ದು ಹೋದ ಒಬ್ಬ ಚೀನಾ ದೇಶದ ಪ್ರವಾಸಿಗ ಹೇಳಿದ: 'ಈ ಪ್ರದೇಶದ ಜನರು ಧೈರ್ಯವಂತ ಯೋಧರಾಗಿದ್ದರು. ಹಾಗೆಯೇ ಬಹಳ ಮುಂಗೋಪಿಗಳೂ ಆಗಿದ್ದರು. ಆದರೂ, ಅವರು ಬುದ್ಧಿವಂತರಾಗಿದ್ದರು ಮತ್ತು ಒಂದು ಸತ್ಯವನ್ನು ಅವರಿಗೆ ಸರಿಯಾಗಿ ವಿವರಿಸಿ ಹೇಳಿದರೆ, ಅದನ್ನು ಹೃದಯ ಪೂರ್ವಕವಾಗಿ ಒಪ್ಪಿಕೊಳ್ಳುವಂತಹವರಾಗಿದ್ದರು. ಸಾಮಾನ್ಯ ಜ್ಞಾನ ಅವರ ಸದ್ಗುಣವಾಗಿದ್ದುದ್ದರಿಂದ ಪುಣ್ಣನ ಮಾತುಗಳನ್ನು ಅವರು ಸರಿಯಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಯಿತು. ವಿಪಶ್ಯನ ಘಂಟೆಯ ಮೊಳಗುವಿಕೆಯ ಕಂಪನಗಳಿಂದ ಈ ಭೂಮಿಯು ಪ್ರತಿಧ್ವನಿಸಲು ಪ್ರಾರಂಭಿಸಿತು.

ಪೈಥಾನ್‌ನಿಂದ ನಾಸಿಕ್‌ವರೆಗೆ ಮತ್ತು ಅಲ್ಲಿಂದಾಚೆಗೆ ಈಗಿನ ನಲ್ಲಾ ಸೊಪಾರ (ಮುಂಬೈನ ಒಂದು ಹೊರ ವಲಯ) ಅಥವಾ ಸುಪ್ಪಾರಕ್ ಪಟ್ಟಣದವರೆಗೆ (ಆಗಿನ ಕಾಲದಲ್ಲಿ ನಲ್ಲ ಸೊಪಾರವನ್ನು ಸುಪ್ಪಾರಕ್ ಪಟ್ಟಣ ಎಂದು ಕರೆಯುತ್ತಿದ್ದರು. ಏಕೆಂದರೆ ಇಲ್ಲಿ ಒಂದು ದೊಡ್ಡ ಬಂದರು ಇತ್ತು) ತಪಸ್ಸಿನ ಪವಿತ್ರ ಭೂಮಿಯಾಗಿ ಈ ಪ್ರದೇಶ ಬಹು ವೇಗವಾಗಿ ಬೆಳೆಯಿತು.

**ದಾರುಚೀರಿಯ**

ಈ ಸುಪ್ಪಾರಕ್ ಪಟ್ಟಣ ಪ್ರದೇಶದಲ್ಲಿಯೇ ಒಬ್ಬ ಧ್ಯಾನ ಸಾಧಕನು ಆಳವಾದ ಧ್ಯಾನವನ್ನು ಅಭ್ಯಾಸ ಮಾಡುತ್ತಿದ್ದ. ಆದರೆ ಮಲಿನತೆಗಳನ್ನು ಬೇರು ಸಮೇತ ನಿರ್ಮೂಲ ಮಾಡುವಷ್ಟು ಎತ್ತರಕ್ಕೆ ಅವನು ತಲುಪಲು ಸಾಧ್ಯವಾಗಿರಲಿಲ್ಲ. ಉತ್ತರ ಭಾರತದಲ್ಲಿ ಒಬ್ಬ ಬುದ್ಧ ಇದ್ದಾರೆ, ತನ್ನೊಳಗೇ ಆಳಕ್ಕೆ ಹೋಗಿ ಮನಸ್ಸಿನ ಎಲ್ಲಾ ಮಲಿನತೆಗಳಿಂದ ಹೊರ ಬರುವ ಮಾರ್ಗವನ್ನು ಹುಡುಕಿದ್ದಾರೆ ಎಂದು ಅವನು ಕೇಳಿದ. ಅವರು ಬುದ್ಧ ಆಗಿರುವುದರಿಂದ ಈಗ ಅವರು ಸಂಪೂರ್ಣ ಮುಕ್ತಿ ಹೊಂದಿ ಜನನ ಮತ್ತು ಮರಣ ಚಕ್ರದಿಂದ ಮುಕ್ತರಾಗಿದ್ದಾರೆ. ಈ ಧ್ಯಾನ ಸಾಧಕ ಆಲೋಚಿಸಿದ, "ಓ, ಈ ಕಾರಣಕ್ಕಾಗಿಯೇ ಅಲ್ಲವೆ ನಾನು ಮನೆಯನ್ನು ಬಿಟ್ಟು ಸನ್ಯಾಸಿಯಾದದ್ದು?

ಈ ಹಳೆಯ ಧ್ಯಾನಿ, ದಾರು ಚೀರಿಯ, ಆತುರದಿಂದ ಬುದ್ಧರನ್ನು ಭೇಟಿಯಾಗಲು ನಲ್ಲ ಸೊಪಾರದಿಂದ ಸಾವತ್ಥಿ(ಶಾವಸ್ತಿ)ಯವರೆಗೆ ಶ್ರಮವರಿಯದೆ ಕಾಲು ನಡಿಗೆಯಲ್ಲಿ ಹೋದ. ಬುದ್ಧರಿಂದ ಬೋಧನೆ ಪಡೆದುಕೊಂಡ ಮೇಲೆ ಸಂಪೂರ್ಣ ಮುಕ್ತನಾಗಿ ಅರಹಂತನಾದ. ದುರದೃಷ್ಟವಶಾತ್ ಅವನು ಮಧ್ಯಭಾರತದ ಮಹಾರಾಷ್ಟ್ರಕ್ಕೆ ಹಿಂದಿರುಗಿ ತನ್ನ ಜನಗಳಿಗೆ ಧಮ್ಮ ಬೋಧನೆ ಮಾಡಲು ಸಾಧ್ಯವಾಗಲಿಲ್ಲ. ಏಕೆಂದರೆ, ಅವನು ಸಾವತ್ಥಿಯಲ್ಲಿಯೇ ಕೊನೆಯುಸಿರೆಳೆದ.

**ಬಾವರೀ ಬ್ರಾಹ್ಮಣ**

ಕೋಸಲ ರಾಜ್ಯದ ರಾಜ ಮಹಾಕೋಸಲನ ಆಸ್ಥಾನದ ಬ್ರಾಹ್ಮಣ ಪುರೋಹಿತನಾದ ಬಾವರಿಯು ವಯಸ್ಸಾದ ಮೇಲೆ ಪೈಥಾನ್‌ಗೆ ಹೋಗಿ ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡನು. ಸಾವಿರಾರು ವರ್ಷಗಳಿಂದ ಯಜ್ಞ ಮತ್ತು ತಪಸ್ಸಿನಂತಹ ಆಧ್ಯಾತ್ಮಿಕ ಅಭ್ಯಾಸಕ್ಕಾಗಿ ಜನರು ದೇಶದ ಎಲ್ಲಾ ಕಡೆಗಳಿಂದ ಗೋದಾವರಿ ನದಿಯ ದಡದಲ್ಲಿ ಕಿಕ್ಕಿರಿದು ಸೇರುತ್ತಿದ್ದರು. ಗೋದಾವರಿ ನದಿಯಿಂದ ಪೈಥಾನ್‌ವರೆಗಿನ ಈ ಪ್ರದೇಶವನ್ನು ಪ್ರತಿಷ್ಠಾಪನ ಭೂಮಿ ಎಂದು ಕರೆಯಲಾಗುತ್ತಿತ್ತು. ಬಾವರಿ ಬ್ರಾಹ್ಮಣನೂ ಸಹ ಇಲ್ಲಿಗೆ ಬಂದು ಅಗ್ನಿಹೋತ್ರ ಯಜ್ಞ (ಅಗ್ನಿದೇವನ ಪೂಜೆ) ಮತ್ತು ಕೆಲವು ಧ್ಯಾನಗಳಲ್ಲಿ ಮುಳುಗಿ ಹೋದ. ಉತ್ತರ ಭಾರತದಲ್ಲಿ ಒಬ್ಬರಿದ್ದಾರೆ. ಅವರು ಪುನಃ ವಿಪಶ್ಯನವನ್ನು ಕಂಡುಹಿಡಿದಿದ್ದಾರೆ ಎಂಬುದನ್ನು ಅವನು ಕೇಳಿದ್ದ. ವೇದಗಳಲ್ಲಿ ವಿಪಶ್ಯನದ ಬಗ್ಗೆ ಪ್ರಸ್ತಾಪವಿದೆ ಮತ್ತು ಅದನ್ನು ಬಹಳ ಪ್ರಶಂಸಿಸಲಾಗಿದೆ ಎಂಬುದು ಅವನಿಗೆ ತಿಳಿದಿತ್ತು. ಉತ್ತರ ಭಾರತದಲ್ಲಿರುವ ಈ ವ್ಯಕ್ತಿಯು ಭಗವಾನ್ ಬುದ್ಧ, ಸಂಪೂರ್ಣ ಮುಕ್ತನಾಗಿದ್ದಾನೆ ಎಂಬುದನ್ನೂ ಸಹ ಕೇಳಿದ್ದ. ಇದು ಅವನಿಗೆ ಪ್ರೇರಣೆ ನೀಡಿತು. ಆದರೆ ನೂರು ವರ್ಷ ವಯಸ್ಸಾದ ಅವನು ಪ್ರಯಾಣಿಸುವುದಾದರೂ ಹೇಗೆ?

ಬಾವರಿಗೆ ಬಹಳ ಜನ ಶಿಷ್ಯರಿದ್ದರು. ಅವನು ಕೇಳಿದ್ದು ಸರಿಯೇ ಎಂಬುದನ್ನು ಕಂಡುಹಿಡಿಯಲು ತನ್ನ 16 ಪ್ರಮುಖ ಶಿಷ್ಯರನ್ನು ಶಾವಸ್ತಿಗೆ ಕಳುಹಿಸಿದ. ಬುದ್ಧನು ನಿಜವಾದ ಗುರುವೇ ಅಥವಾ ಕಪಟ ವೇಷಧಾರಿಯೇ ಎಂದು ತಿಳಿಯಲಿಚ್ಛಿಸಿದ. ಏಕೆಂದರೆ ಧರ್ಮದ ಹೆಸರಿನಲ್ಲಿ ಬೇಕಾದಷ್ಟು ನಕಲಿ ಮತ್ತು ಸುಳ್ಳು ಪ್ರಚಲಿತವಾಗಿತ್ತು. "ಎಚ್ಚರಿಕೆಯಿಂದ ಪರೀಕ್ಷಿಸಿ, ಅವನ ಬೋಧನೆಯು ನಿಜವಾಗಿಯೂ ಮುಕ್ತಿಯ ಸರ್ವಶ್ರೇಷ್ಠ ಮಾರ್ಗ ಎಂದು ನಿಮಗೆ ಕಂಡರೆ, ಆಗ ನೀವು ಆ ಮಾರ್ಗದಲ್ಲಿ ನಡೆಯಿರಿ. ಮತ್ತು ನನಗೂ ಸಹ ಬೋಧಿಸಲು ವಾಪಸು ಬನ್ನಿ" ಎಂದು ತನ್ನ ಶಿಷ್ಯರಿಗೆ ಆದೇಶಿಸಿದ. ಈ 16 ಜನ ಶಿಷ್ಯರು ಹೋಗಿ ವಿಪಶ್ಯನವನ್ನು ಕಲಿತರು. ಸಾಧ್ಯವಿರುವ ಎಲ್ಲಾ ರೀತಿಯಿಂದಲೂ ಅದನ್ನು ಪರೀಕ್ಷೆ ಮಾಡಿದ ಮೇಲೆ ಅದು ವಾಸ್ತವಿಕವಾಗಿದೆ ಮತ್ತು ಪ್ರಯೋಜನಕಾರಿಯಾಗಿದೆ ಎಂಬುದನ್ನು ಕಂಡುಕೊಂಡು ನಂತರ ಅವರು ಹಿಂತಿರುಗಿದರು.

ಜನರು ಮನಸಾರೆ ವಿಪಶ್ಯನವನ್ನು ಹೇಗೆ ಒಪ್ಪಿಕೊಂಡರು ಎಂಬುದನ್ನು ಇತಿಹಾಸದ ಈ ಉದಾಹರಣೆಗಳು ನಮಗೆ ತಿಳಿಸುತ್ತವೆ. ತನ್ನ ಮನಸ್ಸನ್ನು

ಶುದ್ಧಿ ಮಾಡಿಕೊಳ್ಳುವುದು ಮತ್ತು ಒಳ್ಳೆಯ ಜೀವನವನ್ನು ನಡೆಸುವುದನ್ನು ಯಾರು ಬಯಸದಿರುತ್ತಾರೆ? ಕೆಟ್ಟ ಜೀವನವನ್ನು ನಡೆಸಲು ಯಾವ ವ್ಯಕ್ತಿಯೂ ಬಯಸುವುದಿಲ್ಲ. ಕುಡಿಯುವುದು ತನಗೆ ಹಾನಿಕಾರಕ ಮತ್ತು ತನ್ನ ಕುಟುಂಬಕ್ಕೆ ಅಪಾಯಕಾರಿ ಎಂಬುದು ಒಬ್ಬ ಕುಡುಕನಿಗೆ ಬಹಳ ಚೆನ್ನಾಗಿ ತಿಳಿದಿರುತ್ತದೆ. ಕುಡಿತ ಅವನ ದುಡಿಮೆಯನ್ನು ಮತ್ತು ಅವನ ಜೀವನವನ್ನು ನಾಶ ಮಾಡುತ್ತದೆ.

ಒಬ್ಬ ಕುಡುಕನಿಗೆ ಅಥವಾ ಒಬ್ಬ ಜೂಜುಕೋರನಿಗೆ ಅಥವಾ ಇನ್ನಿತರೆ ಕೆಟ್ಟ ಚಟುವಟಿಕೆಗಳಲ್ಲಿ ತೊಡಗಿರುವ ಒಬ್ಬ ಮನುಷ್ಯನಿಗೆ ಇಂತಹ ಕ್ರಿಯೆಗಳಲ್ಲಿ ತೊಡಗಬಾರದು ಎಂಬುದು ಚೆನ್ನಾಗಿ ತಿಳಿದಿರುತ್ತದೆ. ಆದರೆ ಸಮಯ ಬಂದಾಗ, ಅವುಗಳನ್ನು ಮಾಡದಿರುವ ಬದಲು, ಅವುಗಳ ಆಕರ್ಷಣೆಗೆ ಬಲಿಯಾಗಿ ಬಿಡುತ್ತಾನೆ. ಪಾಪ ಬಡಪಾಯಿ ಏನು ಮಾಡಲು ಸಾಧ್ಯ?

ಪುರಾತನ ಹಿಂದೂ ಮಹಾಕಾವ್ಯವಾದ ಮಹಾಭಾರತದಲ್ಲಿ ದುರ್ಯೋಧನನ ಬಗ್ಗೆ ಒಂದು ಪ್ರಸಂಗವಿದೆ. ಯಾರಿಗಾದರೂ ಆಶ್ಚರ್ಯವಾಗಬಹುದು. ನಿಜಕ್ಕೂ ಏಕೆ ದುರ್ಯೋಧನನ ಹೆತ್ತವರು ಅವನನ್ನು ದುರ್ಯೋಧನ ಅಂದರೆ ಕೆಟ್ಟ ಕೆಲಸ ಮಾಡುವವನು ಎಂದು ಕರೆದರು. ಸುಯೋಧನ ಅಂದರೆ ಒಳ್ಳೆಯ ಕೆಲಸ ಮಾಡುವವನು ಎಂದು ಏಕೆ ಕರೆಯಲಿಲ್ಲ? ಅದಕ್ಕೆ ದುರ್ಯೋಧನ ಹೇಳಿದ:

***ಜಾನಾಮಿ ಧರ್ಮಂ ನ ಚ ಮೇ ಪ್ರವೃತ್ತಿ;***
***ಜಾನಾಮಿ ಅಧರ್ಮಂ ನ ಚ ಮೇ ನಿವೃತ್ತಿ***

ಧರ್ಮವೆಂದರೇನು ಎಂಬುದು ನನಗೆ ಗೊತ್ತು. ಆದರೆ ಅದರ ಬಗ್ಗೆ ನನಗೆ ಒಲವಿಲ್ಲ.

ಯಾವುದು ಧರ್ಮ ಅಲ್ಲ ಎಂಬುದು ನನಗೆ ಗೊತ್ತು. ಆದರೆ ಅದರಿಂದ ಮುಕ್ತನಾಗಲು ನನಗೆ ಒಲವಿಲ್ಲ.

ಇವು ಬರೀ ದುರ್ಯೋಧನನ ಮಾತುಗಳಷ್ಟೇ ಅಲ್ಲ. ಪ್ರತಿಯೊಬ್ಬ ಸಾಮಾನ್ಯ ಮನುಷ್ಯನೂ ಸಹ ಈ ರೀತಿ ಯೋಚಿಸುತ್ತಾನೆ. ನಾನು ಕೆಟ್ಟ ಮಾತುಗಳನ್ನಾಡಬಾರದು ಅಥವಾ ಕೆಟ್ಟ ಕೆಲಸಗಳನ್ನು ಮಾಡಬಾರದು ಎಂಬುದು ವ್ಯಕ್ತಿಗೆ ತಿಳಿದಿರುತ್ತದೆ. ಆದರೂ ಅವನು ಅವುಗಳನ್ನು ಮಾಡುತ್ತಾನೆ. ತನ್ನನ್ನು ತಾನು ಒಳ್ಳೆಯ ಕೆಲಸಗಳಲ್ಲಿಯೇ ಮುಳುಗಿಸಿಕೊಳ್ಳಬೇಕು ಎಂದು ತಾರ್ಕಿಕವಾಗಿ ಅವನು ಅರ್ಥ ಮಾಡಿಕೊಳ್ಳುತ್ತಾನೆ. ಆದರೆ ಆ ರೀತಿ ಮಾಡಲು ಸಾಧ್ಯವಾಗುವುದಿಲ್ಲ. ಏಕೆ? ಮನಸ್ಸು ಅವನ ನಿಯಂತ್ರಣದಲ್ಲಿಲ್ಲ.

ಹಾಗಾದರೆ ಮನಸ್ಸನ್ನು ನಿಯಂತ್ರಿಸುವುದು ಹೇಗೆ?

(ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು)

**ತಪೋದಾನ**

ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೂಕಿಲ್ಲಿ ಹೊಸ ವಿಪಶ್ಯನ ಧ್ಯಾನ ಕೇಂದ್ರ ಸ್ಥಾಪನೆಯಾಗುತ್ತಿರುವುದು ಸಂತೋಷದ ವಿಷಯ. ಕರ್ನಾಟಕದಲ್ಲಿ ಇದು ಎರಡನೆಯ ವಿಪಶ್ಯನ ಧ್ಯಾನ ಕೇಂದ್ರ. ಆ ಸ್ಥಳದ ಧಮ್ಮ ತರಂಗಗಳನ್ನು ಬಲಗೊಳಿಸುವ ಸಲುವಾಗಿ ಪ್ರತಿ ತಿಂಗಳು ಎರಡನೆಯ ಶನಿವಾರ ಸಾಮೂಹಿಕ ಸಾಧನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆದ್ದರಿಂದ, ಹಳೆಯ ವಿಪಶ್ಯನ ಧ್ಯಾನ ಸಾಧಕರು ಈ ಸಾಮೂಹಿಕ ಸಾಧನೆಯಲ್ಲಿ ಪಾಲ್ಗೊಳ್ಳುವ ಮೂಲಕ ತಪೋದಾನ ನೀಡಬೇಕಾಗಿ ಕೋರಲಾಗಿದೆ.

ಧ್ಯಾನದ ಸ್ಥಳ ತಲುಪಲು ಮಾಹಿತಿಗಾಗಿ ಸಂಪರ್ಕಿಸಿ : 8880519658/ 8088648226. ನೋಂದಣಿಗಾಗಿ ಸಂಪರ್ಕ ಸಂಖ್ಯೆ : 9480581708.

## ಧಮ್ಮ ಪಫುಲ್ಲಾ, ಬೆಂಗಳೂರು

**10 ದಿನದ ಶಿಬಿರಗಳು: 2017** ಜುಲೈ 12–23, 26–6 ಆಗಸ್ಟ್ 9–20, ಸೆಪ್ಟಂಬರ್ 7–18, ಅಕ್ಟೋಬರ್ 4–15, 18–29, ನವೆಂಬರ್ 15–26, 29–10 ಡಿಸೆಂಬರ್ 13–24.**ಮೂರು ದಿನದ ಶಿಬಿರ:** ಸೆಪ್ಟಂಬರ್ 21–24, 28–31 ಡಿಸೆಂಬರ್.**ಎರಡು ದಿನದ ಶಿಬಿರ:** ನವೆಂಬರ್ 10–12. **ಸತಿಪಠ್ಠಾನ ಶಿಬಿರಗಳು:** ಆಗಸ್ಟ್ 28–5 ಸೆಪ್ಟಂಬರ್, ನವೆಂಬರ್ 1–9. **ವಿಳಾಸ:** ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಹತ್ತಿರ ಇಳಿದು ಅದರ ಎದುರು ರಸ್ತೆಯಲ್ಲಿ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ (ಕೆಂಪೇಗೌಡ) ಬಸ್ ನಿಲ್ದಾಣದಿಂದ ನಗರ ಸಾರಿಗೆ ಬಸ್ ಸಂಖ್ಯೆ: 256, 258, 258ಸಿ. ದೂ.: 080–23712377, ಮೊಬೈಲ್: 7829912733, 8861644284, 9972588377,

ಇ–ಮೇಲ್:info@paphulla.dhamma.org; website: www.dhamma.org.

## ಬೆಂಗಳೂರಿನಲ್ಲಿ ಸಾಮೂಹಿಕ ಸಾಧನಾ ಶಿಬಿರಗಳ ಮಾಹಿತಿ

**ಪ್ರತಿ ಭಾನುವಾರ: ಜಯನಗರ:** ಬೆಳಿಗ್ಗೆ 8.30 ರಿಂದ 9.30ರವರೆಗೆ, ಸುರೇಶ್/ ರಾಜೇಶ್ವರಿ – 98867 75401 **ಸರ್ಜಾಪುರ ರಸ್ತೆ:** ಬೆಳಿಗ್ಗೆ 9.00 ರಿಂದ 10.00, ನಿರ್ಮಲ್ ಬೋತ್ರಾ–93412 22999, ಸ್ವಾತಿ–93426 75811, **ಬಸವೇಶ್ವರ ನಗರ** ಬೆಳಿಗ್ಗೆ 8.00 ರಿಂದ 9.00ರವರೆಗೆ, ಶ್ರೀ ಮಂಜುನಾಥ: 098451 71600, ಹೇಮಂತ: 074118 74462, **ಮಲ್ಲೇಶ್ವರಂ:** 8.30ರಿಂದ 9.30ರವರೆಗೆ, ಶ್ರೀ ದಿನೇಶ್ ಕುಮಾರ್–99452 38441 **ಕೆಂಗೇರಿ:** ಸಂಜೆ 4.30ರಿಂದ 5.30ರವರೆಗೆ, ವಸಂತ್ ಜಾಜೋ–98453 95152, 98445 29309. **ಆರ್.ಎಂ.ವಿ. 2ನೇ ಹಂತ:** ಬೆಳಿಗ್ಗೆ 7.50ರಿಂದ 9.00ರವರೆಗೆ, ಶ್ರೀ ತಾರಕ್ ಗೋರಾಡಿಯಾ–99454 58593.

**ಪ್ರತಿ ಶನಿವಾರ: ವಿಜಯನಗರ:** ಸಂಜೆ 6–00 ರಿಂದ 7–00ರವರೆಗೆ, ತುಕಾರಾಮ್–97433 63339, ಪವನ್‌ಕುಮಾರ್–77607 52220.

**ಪ್ರತಿ ಮೊದಲ ಭಾನುವಾರ: ವೈಟ್‌ಫೀಲ್ಡ್:** ಬೆಳಿಗ್ಗೆ 9–30 ರಿಂದ 10–30ರವರೆಗೆ, ಶ್ರೀಮತಿ ವಲ್ಲರಿ/ರಾಜೇಶ್ ಮೊ.: 97403 22447

ಬೆಂಗಳೂರಿನಲ್ಲಿ ಸಾಮೂಹಿಕ ಸಾಧನೆಗಳ ಬಗ್ಗೆ ಮಾಹಿತಿ ತಿಳಿಯಲು ವೆಬ್ ವಿಳಾಸ: http://www.paphulla.dhamma.org/os/paphulla sittings.htm

## ಒಂದು ದಿನದ ಶಿಬಿರಗಳ ಮಾಹಿತಿ

**ಬೆಂಗಳೂರು:** ಪ್ರತಿ ಭಾನುವಾರ 10 ರಿಂದ 4 ಗಂಟೆ, ಧಮ್ಮ ಪಫುಲ್ಲ, ಆಲೂರು. **ಮೈಸೂರು:** ಪ್ರತಿ ತಿಂಗಳು 4ನೇ ಭಾನುವಾರ. ಸಂಪರ್ಕ ಸಂಖ್ಯೆಗಳು: 9481149553, 99801005309. **ಉಡುಪಿ:** ಪ್ರತಿ ತಿಂಗಳು ಎರಡನೇ ಭಾನುವಾರ. ಸಂಪರ್ಕ ಸಂಖ್ಯೆಗಳು: 9980897955 / 9449773942 9481149553. **ದಾವಣಗೆರೆ:** ಪ್ರತಿ ತಿಂಗಳು ಕೊನೆ ಭಾನುವಾರ. ಸಂಪರ್ಕ ಸಂಖ್ಯೆಗಳು: 9844245111 / 9986962762 9448588789 **ಹುಬ್ಬಳ್ಳಿ:** ಪ್ರತಿ ತಿಂಗಳು ಮೂರನೇ ಭಾನುವಾರ. ಸಂಪರ್ಕ ಸಂಖ್ಯೆ: 9880661506

**10 ದಿನದ ಶಿಬಿರ ಆಯೋಜಿಸುವವರು ಸಲಹೆ, ಸೂಚನೆಗಳಿಗಾಗಿ ಸಂಪರ್ಕಿಸಿ : ಸಂತೋಷ ಧರ್ಮರಾಜ್, ಬೆಂಗಳೂರು. ಮೊಬೈಲ್: 8762086089**

**10ದಿನದ ಶಿಬಿರದಲ್ಲಿ ಭಾಗವಹಿಸಲು ಆನ್‌ಲೈನ್ ನೋಂದಣಿ ಸಹಾಯಕ್ಕಾಗಿ ಸಂಪರ್ಕಿಸಿ.** ಬಳ್ಳಾರಿ: ಎ.ಮಲ್ಲಿಕಾರ್ಜುನಪ್ಪ, ಮೊ.ಸಂ. 9449511217. ಬೆಳಗಾವಿ: ವೀರನಗೌಡ ವಿ.ಸಾರನಾಡಗೌಡ್ರ, ಮೊ.ಸಂ.9902657335. ದಾವಣಗೆರೆ: ಉದಯ ಶಿವಕುಮಾರ್, ಮೊ.ಸಂ. 9739314581(ಮೆಸೇಜ್ ಮಾಡಿ, ಅವರೇ ಕರೆ ಮಾಡುತ್ತಾರೆ.) ಜಿ.ಟಿ.ಗೋವಿಂದಪ್ಪ, ಮೊ.ಸಂ.9448588789.

**ವಂತಿಗೆ : ವಾರ್ಷಿಕ: ರೂ. 30, ಆಜೀವ: ರೂ. 500. ಚೆಕ್ ಅಥವಾ ಡಿ.ಡಿ. ಪಡೆಯಬೇಕಾದ ಹೆಸರು : 'ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ'. ಪಾವತಿಸುವ ಸ್ಥಳ: ಬೆಂಗಳೂರು. ಬ್ಯಾಂಕ್ : ಯಾವುದೇ ರಾಷ್ಟ್ರೀಕೃತ ಬ್ಯಾಂಕ್ ಚೆಕ್ ಅಥವಾ ಡಿಡಿಯ ಜೊತೆಗೆ ಸ್ವ ವಿಳಾಸದ ಚೀಟಿ ಇಡಿ**

**ಮುದ್ರಕರು:** ಬಿ.ಪ್ರದೀಪ ಕುಮಾರ, **ಪ್ರಕಾಶಕರು:** ಶ್ರೀಮತಿ ಆರ್. ಚಂದ್ರಮತಿ ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ. **ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070.
**ಗೌರವ ಸಂಪಾದಕರು:** ಜಿ.ಟಿ. ಗೋವಿಂದಪ್ಪ

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor:** G.T. Govindappa,

ತೆರೆದ–ಅಂಚೆ

**ಮುದ್ರಿತ ವಿಷಯ**

ಗೆ,

ಇಂದ:

**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.